1	2	3	4
II.	**ಎರಡನೇಯ ಹಂತದಲ್ಲಿ ನಿರ್ಮಿಸಲಾದ ಕಟ್ಟಡಗಳು 1985-1992**		
1.	ರೇಷ್ಮೆ ಸಹಾಯಕ ನಿರ್ದೇಶಕರ ವಸತಿ ಗೃಹಗಳು-(3)	5.40	ಅಧಿಕಾರಿಗಳ ವಸತಿಗಾಗಿ ಬಳಸಲಾಗುತ್ತಿದೆ.
2.	ಸಿಬ್ಬಂದಿಗಳ ವಸತಿ ಗೃಹಗಳು (17)	18.20	ಸಿ ಮತ್ತು ಡಿ ವರ್ಗದ ಸಿಬ್ಬಂದಿಗಳ ವಸತಿಗಾಗಿ ಬಳಸುತ್ತಿದೆ.
3.	ಮಹಿಳಾ ತರಬೇತಿದಾರರ ವಸತಿ ಗೃಹ	10.80	ಸದರಿ ವಸತಿ ಗೃಹವನ್ನು ತರಬೇತಿದಾರರ ಉಪಯೋಗಕ್ಕಾಗಿ ಬಳಸಲಾಗುತ್ತಿದೆ.
4.	ಮೌಂಟಿಂಗ್ ಹಾಲ್	2.16	ಹಣ್ಣಾದ ರೇಷ್ಮೆ ಹುಳುಗಳನ್ನು ಗೂಡು ಕಟ್ಟಲು ಬಿಡುವುದಕ್ಕಾಗಿ ಬಸಳಲಾಗುತ್ತಿದೆ.
5.	ಚಾಕಿ ಸಾಕಾಣಿಕಾ ಕೇಂದ್ರ	1.43	ನೂತನ ತಳಿಗಳ ಚಾಕಿ ಹುಳುಗಳನ್ನು 2ನೇ ಹಂತದವರೆಗೆ ವೈಜ್ಞಾನಿಕವಾಗಿ ಸಾಕಾಣಿಕೆ ಮಾಡಲು ಬಳಸಲಾಗುತ್ತಿದೆ
6.	ಬಲಿತ ಹುಳುಗಳ ಸಾಕಾಣಿಕೆ ಕಟ್ಟಡ	12.50	ಬಲಿತ ಹುಳುಗಳನ್ನು ಹಣ್ಣಾಗುವವರೆಗೆ ವೈಜ್ಞಾನಿಕವಾಗಿ ಸಾಕಾಣಿಕೆ ಮಾಡಲು ಬಳಸಲಾಗುತ್ತಿದೆ.

ರೇಷ್ಮೆ ಮಾರುಕಟ್ಟೆ ನಿಗಮದಲ್ಲಿ 5 ಕೋಟಿ ರೂ. ಅವ್ಯವಹಾರದ ಬಗ್ಗೆ

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಮಾರುಕಟ್ಟೆ ಹಾಗೂ ರೇಷ್ಮೆ ಕೈಗಾರಿಕಾ ನಿಗಮದಲ್ಲಿ ಅವ್ಯವಹಾರ ಪ್ರಕರಣ ನಡೆದಿದೆ;

ಆ) ನಡೆದಿದಲ್ಲಿ, ಹಗರಣದ ಸ್ವರೂಪ ಎಂತಹದ್ದು, ಹಗರಣದ ಮೊತ್ತವೆಷ್ಟು?

ಇ) ತಪ್ಪಿತಸ್ಥರು ಯಾರೆಂದು ಗುರುತಿಸಲಾಗಿದೆ; ಇಂತಹವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಈ ಅವ್ಯವಹಾರವನ್ನು ಸಿ.ಓ ಡಿ. ತನಿಖೆಗೆ ಒಪ್ಪಿಸಲಾಗಿದೆಯೇ; ತನಿಖೆ ಯಾವ ಹಂತದಲ್ಲಿದೆ?

ಶ್ರೀ ಎಂ. ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಈ ವಿಷಯವಾಗಿ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮಕ್ಕೆ ಸಂಬಂಧಿಸಿದಂತೆ ಅವ್ಯವಹಾರ ಕಂಡು ಬಂದಿಲ್ಲ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಸಂಬಂಧಿಸಿದ 1999-2000ನೇ ಸಾಲಿನಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕಾಗಿ ಖರೀದಿಸಿದ ರೇಷ್ಮೆಯಲ್ಲಿ ಅವ್ಯವಹಾರ ನಡೆದಿರುವುದಾಗಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕೆ.ಹೆಚ್.ಡಿ.ಸಿ. ಗೆ ಸರಬರಾಜು ಮಾಡಿದ ರೇಷ್ಮೆಯನ್ನು ಗ್ರಿಡ್ ದರಕ್ಕಿಂತ ಹೆಚ್ಚಿಗೆ ದರದಲ್ಲಿ ಹರೀದಿಸಿದ ಬಗ್ಗೆ ನಡೆದ ಅವ್ಯವಹಾರದ ಮೊತ್ತ ಅಂದಾಜು ರೂ. 16.

ಇ) ಹೌದು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಮತ್ತು ಕೈಮಗ್ಗ ಅಭಿವೃದ್ಧಿ ನಿಗಮದ ಅಧಿಕಾರಿಗಳು ಈ ಅವ್ಯವಹಾರದಲ್ಲಿ ಪಾಲ್ಗೊಂಡಿರುವುದರಿಂದ ಪೂರ್ವಭಾವಿ ತನಿಖೆಯನ್ನು ನಡೆಸಿದ್ದು, ಸಂಬಂಧಪಟ್ಟ ರೇಷ್ಮೆ ಮಾರಾಟ ಮಂಡಳಿಯ ಏಳು ಅಧಿಕಾರಿಗಳನ್ನು ಅಮಾನತ್ತುಗೊಳಿಸಿದ್ದು, ಇಲಾಖಾ ವಿಚಾರಣೆ ನಿರೀಕ್ಷಿಸಿ, ಅಮಾನತ್ತನ್ನು ರದ್ದುಗೊಳಿಸಲಾಗಿದೆ.

ಈ) ಈ ಅವ್ಯವಹಾರವನ್ನು ಸಿ.ಓ.ಡಿ. ತನಿಖೆಗೆ ವಹಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ.

ತ್ರಿಶಂಕು ಸ್ಥಿತಿಯಲ್ಲಿರುವ ಕುಡುಬಿ ಜನಾಂಗದವರು

314 (500) ಶ್ರೀ ವಿ. ರಾಮದಾಸ್ (ಕೃಷ್ಣರಾಜ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದ ಬುಡಕಟ್ಟು ಜನಾಂಗಗಳಲ್ಲೊಂದಾದ ಕುಡುಬಿ ಜನಾಂಗ ತ್ರಿಶಂಕು ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಜನಾಂಗ ಯಾವ ಭಾಗದಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ? ಇವರ ಜನಸಂಖ್ಯೆ ಎಷ್ಟು?

ಇ) ಇವರಿಗೆ ಸರ್ಕಾರಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿದೆಯೇ?

ಈ) ಕುಡುಬಿ ಜಾತಿಯನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಗೊಳಿಸಿಲ್ಲವೇ?

ಉ) ಈ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ''ಕುಡುಬಿ'' ಜಾತಿಯನ್ನು ಕಡುಬಡವರ ಪ್ರವರ್ಗ-1 ರ ಪಟ್ಟಿಯಲ್ಲಿ ಸೇರಿಸಿದೆ. ಸದರಿ ಜಾತಿಯು ಪ್ರವರ್ಗ-1ರಲ್ಲಿರುವುದರಿಂದ ಇವರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ಆ) ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಾಗಿರುವರು. ಹಾವನೂರು ಆಯೋಗದ ವರದಿ ಪ್ರಕಾರ 1977ರಲ್ಲಿ 17,410 ರಷ್ಟು ಇದ್ದು 1994ರಲ್ಲಿ 27,494 ಎಂದು ಅಂದಾಜಿಸಿದೆ.